# A1 KIDS CAMP

#1454, Opposite to Raghavendra Temple, V.T.Road, Kote, Channapatna Town,
Ramanagara Dist, Karnataka – 562160, website: www.a1kidscamp.com

**ವಿಜ್ಞಾನ ಬೇಸಿಗೆ ಶಿಬಿರ ಉದ್ಘಾಟನೆ**

ದಿನಾಂಕ 11/04/2018 ರಂದು ಬೆಳಿಗ್ಗೆ ಚನ್ನಪಟ್ಟಣದ ವಿ.ಟಿ.ರಸ್ತೆಯ ರಾಘವೇಂದ್ರಮಠದ ಸಭಾಂಗಣದಲ್ಲಿ ಎ–1 ಕಿಡ್ಸ್ ಕ್ಯಾಂಪ್ ಮತ್ತು ಮೈಸೂರ್ ಸೈನ್ಸ್ ಫೌಂಡೇಷನ್ ಸಹಯೋಗದೊಂದಿಗೆ 15 ದಿನಗಳ ವಿಜ್ಞಾನ ಬೇಸಿಗೆ ಶಿಬಿರವನ್ನು ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ಟಿ.ತಿಪ್ಪೇಸ್ವಾಮಿ ರವರು ವೈಜ್ಞಾನಿಕವಾಗಿ ಉದ್ಘಾಟನೆ ಮಾಡಿದರು. ಹೈಡ್ರೋಜನ್ ಪರಾಕ್ಸೈಡ್ ಗೆ ಪೊಟಾಸಿಯಂ ಅಯೊಡೈಡ್ ಮತ್ತು ಸರ್ಫ್ ಪೌಡರ್ ಹಾಕುವ ಮೂಲಕ ನೊರೆ ಹುಕ್ಕಿ ಬರುವಂತೆ ಮಾಡಿ ಉದ್ಘಾಟನೆ ಮಾಡಲಾಯಿತು. ಮಕ್ಕಳಲ್ಲಿ ಕುತೂಹಲ ಹೆಚ್ಚು, ಅವರು ಹೊಸ ಹೊಸ ವಿಚಾರಗಳನ್ನು ಕಲಿಯಲು ಆಸಕ್ತರಾಗಿರುತ್ತಾರೆ, ಅವರ ಕುತೂಹಲವನ್ನು ತಣಿಸಬೇಕಾದರೆ ವಿಜ್ಞಾನ ಬೇಸಿಗೆ ಶಿಬಿರಗಳು ಅಗತ್ಯ ಎಂದು ಡಾ.ಟಿ.ತಿಪ್ಪೇಸ್ವಾಮಿರವರು ಅಭಿಪ್ರಾಯ ಪಟ್ಟರು. ಮಕ್ಕಳು ಮನೆಯಲ್ಲಿ ತೊಂದರೆ ಕೊಡುತ್ತಾರೆ ಎಂದು ಬೇಸಿಗೆ ಶಿಬಿರಗ ಳಿಗೆ ಹಾಕುತ್ತಾರೆ ಅದು ಸರಿ ವಿದಾನವಲ್ಲ, ಶಾಲೆಗಳಲ್ಲಿ ಕಲಿಯಲು ಆಗದ ವಿಷಯಗಳನ್ನು ಕಲಿಸಲಿಕ್ಕಾಗಿ ಮತ್ತು ಮಕ್ಕಳಲ್ಲಿನ ಸುಪ್ತ ಪ್ರತಿಭೆಯನ್ನು ಹೊರ ತರಲು ಯಾವ ಶಿಬಿರಗ ಳು ಉತ್ತಮವೋ ಅಲ್ಲಿ ಸೇರಿಸಿ ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಚನ್ನಪಟ್ಟಣ ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿಗಳಾದ ಶ್ರೀ ಆರ್.ಎಸ್. ಸೀತಾರಾಮು ರವರು ನಾವು ವಿಜ್ಞಾನಿಗಳನ್ನು ಕರೆಯಿಸಿ ಮಾಡಬೇಕಾದ ಕಾರ್ಯಕ್ರಮವನ್ನು ಎ–1 ಕಿಡ್ಸ್ ಕ್ಯಾಂಪ್ ಮಾಡುತ್ತಿದೆ. ಸಾಮಾನ್ಯವಾಗಿ ದೀಪ ಬೆಳಗಿ ಉದ್ಘಾಟನೆ ಮಾಡುವುದು ವಾಡಿಕೆ ಆದರೆ ವೈಜ್ಞಾನಿಕವಾಗಿ ಉದ್ಘಾಟನೆ ಮಾಡಿದ್ದು ವಿಶೇಷ. ಇದರಿಂದ ಮಕ್ಕಳಲ್ಲಿ ಕುತೂಹಲ ಹೆಚ್ಚಾಗುತ್ತದೆ. ವಿಜ್ಞಾನ ಬೇಸಿಗೆ ಶಿಬಿರವನ್ನು ಮೊದಲ ಬಾರಿಗೆ ಚನ್ನಪಟ್ಟಣದಲ್ಲಿ ಹಮ್ಮಿಕೊಂಡಿರುವುದು ನಮಗೂ ಸಂತೋಷ ತಂದಿದೆ. ಇಲಾಖೆ ವತಿಯಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಎ–1 ಕಿಡ್ಸ್ ಕ್ಯಾಂಪ್ ಶಾಲೆಯ ಸಂಸ್ಥಾಪಕರೂ ಆದ ಜಿ.ಎಸ್.ಬಸವರಾಜಪ್ಪರವರು. ಒಳ್ಳೆಯಮಗನಿಗೆ ಆಸ್ತಿ ಮಾಡುವ ಅವಶ್ಯಕತೆಯಿಲ್ಲ ಅವನೇ ಸಂಪಾದಿಸಿಕೊಳ್ಳುತ್ತಾನೆ, ಕೆಟ್ಟಮಗನಿಗೂ ಆಸ್ತಿ ಮಾಡುವ ಅವಶ್ಯಕತೆಯಿಲ್ಲ ಏಕೆಂದರೆ ಎಷ್ಟು ಕೂಡಿ ಕೊಟ್ಟರು ಅದನ್ನು ಕಳೆದುಬಿಡುತ್ತಾನೆ ಆದ್ದರಿಂದ ಮಕ್ಕಳಿಗಾಗಿ ಆಸ್ತಿ ಮಾಡಬೇಡಿ ಮಕ್ಕಳನ್ನೇ ಆಸ್ತಿ ಮಾಡಿ ಎಂದು ಕಿವಿ ಮಾತು ಹೇಳಿದರು. ಮಕ್ಕಳು ಮೂರು ವರ್ಷದಲ್ಲಿ ಏನು ಕಲಿಯುತ್ತಾರೊ ಅದು ನೂರು ವರ್ಷದವರೆಗೆ ಆದ್ದರಿಂದ ಮಕ್ಕಳಿಗೆ ಮೂರು ವರ್ಷದಿಂದಲೇ ಒಳ್ಳೆಯ ಜ್ಞಾನವನ್ನು ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಎ–1 ಕಿಡ್ಸ್ ಕ್ಯಾಂಪ್ ಕಾರ್ಯದರ್ಶಿ ಜಿ.ಬಿ.ಅರುಣ್ ಕುಮಾರ್, ಮೈಸೂರ್ ಸೈನ್ಸ್ ಫೌಂಡೇಷನ್ ಕಾರ್ಯದರ್ಶಿ ಜಿ.ಬಿ.ಸಂತೋಷ್ ಕುಮಾರ್, ಶಾಲೆಯ ಶಿಕ್ಷಕರಾದ ಶ್ರೀಮತಿ ಭಾಗ್ಯಲಕ್ಷ್ಮಿ, ಶ್ರೀಮತಿ ರಕ್ಷ ಮತ್ತು ಶಿಬಿರದ ಸಂಯೋಜಕರಾದ ರವಿ ಉಪಸ್ಥಿತರಿದ್ದರು.

GSB Learning Foundation